ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ.

ತಾರೀಖು 19ನೆ ಮಾರ್ಚ 1907.

ಆಲೂರು ಸಬ್ ತಾಲ್ಲೂಕು ಪಾಳ್ಯದ ಹೋಬಳಿ ಜೋಡಿ ಹೊನ್ನವಳ್ಳೀ ಗ್ರಾಮವು ಜೋಡಿದಾರ್ರು ರಾಘವೇಂದ್ರಾಚಾರ್ ವಗೈ ರೇರಿಂದ ಸರ್ಕಾರಕ್ಕೆ ಬರತಕ್ಕ ಜೋಡಿ ಬಾಕೀಗಾಗಿ 1907ನೆ ಇಸವಿ ಮೇ ಮಾಹೆ 20ನ್ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಪಾಳ್ಯದ ವೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಖ್ಮೀಲ್ ಬಗ್ಯೆ 1907ನೆ ಇಸವಿ ಮಾರ್ಚಿ ಮಾಹೆ 28ನೆ ಮತ್ತು ಗೆಜೆಟ್ಟಿನ 11ನೆ ಭಾಗದ 88—89ನೆ ಪುಟವನ್ನು ನೋಡತಕ್ಕದ್ದು.

ತಾರೀಖು 19ನೆ ಮಾರ್ಚಿ 1907.

ಆಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಮಳಲಹಳ್ಳಿ ಗ್ರಾಮವು ಜೋಡಿದಾರ್ರು ವೆಂಕಟಾಚಾರ್ರು ವಗೈರೆ 6 ಜನಗಳಿಂದ ಸರ್ಕಾರಕ್ಕೆ ಬರತಕ್ಕ ಬಾಕಿಗಾಗಿ 1907ನೆ ಇಸವಿ ಮೇ ಮಾಹೆ 18ನೆ ತಾರೀಖು ಶನಿವಾರದ ದಿವಸ ದಿವಿ 11 ಘಂಟೆ ಲಾಗಾಯಿತು ಕುಂದೂರು ವೊಕ್ಕಾಂನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಈ ಮೂಲಕ ಪ್ರಸಿದ್ಧಪಡಿಸಲ್ಪಟ್ಟಿರುತ್ತೆ.

ಹೆಚ್ಚು ತಖ್ಮೀಲ್ ಬಗ್ಯೆ 1907ನೆ ಇಸವಿ ಮಾರ್ಚಿ ಮಾಹೆ 28ನೆ ಮತ್ತು ಗೆಜೆಟ್ಟಿನ 11ನೆ ಭಾಗದ 87—88ನೆ ಪುಟವನ್ನು ನೋಡತಕ್ಕದ್ದು.

ಟಿ. ಧರ್ಮರಾಜ ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಇಸ್ತಿಹಾರ್‌ನಾಮೆ

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.—1906ನೆ ಇಸವಿ ನಂಬರು 7ನೆ ರೆಗ್ಯುಲೇಷನ್ ಅನುಸರಿಸಿ ಈ ಕೆಳಗೆ ತಪಶೀಲು ಕ್ರಾಣುವ ಜಕ್ಕು ಬಂದಿ ಬಳಗೊಂಡಿರುವ ಶಿವಮೊಗ್ಗಾ ಟವನನ್ನು ಬಂದು ಕಾಯಂ ಮುನಿಸಿಪಾಲಿಟಿಯಾಗಿ ಮಾಡಬೇಕೆಂತ ಆಲೋಚಿಸಿ ಇರುತ್ತದೆ. ಇದಕ್ಕೆ ಆಕ್ಷೇಪಣೆ ತೆಗದುಕೊಳ್ಳುವ ತಮಾಂ ಜನಗಳು ಈ ನೋಟಿಸ್ ಮೈಸೂರು ಗೆಜೆಟಿನಲ್ಲಿ ಘಾಯಿಷಾದ ಎರಡು ತಿಂಗಳು ವಳಗೆ ಶಿವಮೊಗ್ಗಾ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಸಾಹೇಬರವರಲ್ಲಿಗೆ ತಮ್ಮ ತಮ್ಮ ಆಕ್ಷೇಪಣೆ ಅಂಕ ಕುರಿತು ಅದಕ್ಕೆ ಕಾರಣ ಸಮೇತ ಅಪ್ಲಿಕೇಷನ್ ಗುಜರಾಯಿಸಿಕೊಳ್ಳತಕ್ಕದ್ದು.—

ಉತ್ತರಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಲಿಂಗಪ್ಪನ ಪಾಳ್ಯ ಬಂಗಲೆಯ ಕಾಂಪೌಂಡು ವಳಗೊಂಡು ಮುನಿಸಿಪಲ್ ರಸ್ತೆ ಮಾರ್ಗವಾಗಿ ಪೂರ್ವಕ್ಕೆ ಹೋಗಿ ಡೆಪ್ಯುಟಿ ಕಮಿಷನರವರ ಬಂಗಲೆ ಮತ್ತು ಎಗ್ಜಿಕ್ಯೂಟಿವ್ ಇಂಜನಿಯರ್ ಆಫೀಸನ್ನು ಕೇರಿಸಿಕೊಂಡು ಶಿವಮೊಗ್ಗ ಗ್ರಾಮದ 30ನೆ ಸರ್ವೆ ನಂಬರು ಜಮೀನು ಹತ್ತರ ಹೊನ್ನಾಳಿ ರಸ್ತೆಗೆ ಕೇರಿ ಆ ರಸ್ತೆ ಮಾರ್ಗವಾಗಿ ಸದರಿ ರಸ್ತೆಯ ಸೋಮಯ್ಯನವರ ಕೆರೆ ಏರಿ ಮೇಲಿನ ರಸ್ತೆಯನ್ನು ಸಂಧಿಸುವ ಸ್ಥಳದಲ್ಲಿ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 60ನೆ ಜಮೀನು ಬಿಳಿ ಇರುವ ಆಕ್ಟ್ರಾಯಿ ಉಕ್ತಡದವರಿಗೆ.

ದಕ್ಷಿಣಕ್ಕೆ.—ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೊಸ ಟವನು ಬಜಾವಣೆ ಜಾಗಾದಲ್ಲಿ ಇರುವ ಆಕ್ಟ್ರಾಯಿ ಕಟ್ಟೆ ಸಮೀಪದಲ್ಲಿ ಇರುವ ತುಂಗಾನದಿ ಸೇತುವೆಯ ದಕ್ಷಿಣ ಪ್ರಾಂತದ ವರಿಗೂ ತುಂಗಾನದಿಯನ್ನು ವಳಗೊಂಡು ಹಳೆ ಘಾರೆಸ್ಟು ಲಾಡ್ಜ್ ಮತ್ತು ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ವರಿಗೆ ಇರುವ ಇಸಲಾಪುರ ಗ್ರಾಮದ ಮನೆಗಳನ್ನು ಕೇರಿಸಿಕೊಂಡು ಸದರಿ ಇಸಲಾಪುರ ಗ್ರಾಮದ 16, 15, 14 ಮತ್ತು 13ನೆ ಸರ್ವೆ ನಂಬರು ಜಮೀನುಗಳ ವರಿಗೆ.

ಪೂರ್ವಕ್ಕೆ.—ಇಸಲಾಪುರ ಗ್ರಾಮದ ಸರ್ವೆ ನಂಬರು 13ನೆ ಜಮೀನು ಲಾಗಾಯಿತು ಶಿವಮೊಗ್ಗಾದಿಂದ ಹೊಳೆಹೊನ್ನೂರಿಗೆ ಹೋಗುವ ರಸ್ತೆಯಲ್ಲಿ ಇರುವ ಗಡಿಕಲ್ಲಿನಬಳಿ ಸದರಿ ರಸ್ತೆಯನ್ನುದಾಟಿ 26, 25, 24, 21ನೆ ಸರ್ವೆ ನಂಬರು ಜಮೀನುಗಳ ಮಾರ್ಗವಾಗಿ ಹಳೇ ಡಿಸ್ಪೆನ್ಸರಿ ಕಟ್ಟಡದ ವರಿಗೆ ಬಂದು ಅಲ್ಲಿಂದ ತುಂಗಾ ನದಿ ಸೇತುವೆಯ ಪಶ್ಚಿಮ ದಿಕ್ಕಿನ ತುದಿ ವರಿಗೆ ಹೋಗಿ ಅಲ್ಲಿಂದ ಆಕ್ಟ್ರಾಯಿ ಕಟ್ಟೆ ಮುಂಭಾಗದಲ್ಲಿ ತಿರುಗಿ ಹೊನ್ನಾಳಿ ರಸ್ತೆ ಮಾರ್ಗವಾಗಿ ಸೋಮಯ್ಯನವರ ಕೆರೆ ಏರಿ ಮೇಲೆ ಹಾದು (1ನೆ ಕಾಸಿನಲ್ಲಿ ನಮೂದು ಮಾಡಿರುವ ಮುಳ್ಳಕೆರೆ ಗ್ರಾಮದ ಸರ್ವೆ ನಂಬರು 6ನೆ ಜಮೀನಬಳಿ) ಹೊನ್ನಾಳಿ ರಸ್ತೆ ಕೂಡುವ ಸ್ಥಳದಲ್ಲಿ ಇರುವ ಆಕ್ಟ್ರಾಯಿ ಕಟ್ಟೆವರಿಗೆ.

ಪಶ್ಚಿಮಕ್ಕೆ.—ಬೆಂಗಳೂರು-ಹೊನ್ನಾವರ ರಸ್ತೆಯಲ್ಲಿ ಇರುವ ಗಡಿಕಲ್ಲು ಲಾಗಾಯಿತು ಹೋಟಗೆರೆ ಮುದಿಗೇಂದಪ್ಪನ ಬಂಗಲೆಯನ್ನು ಬಳಗೊಂಡು ಸದರಿ ರಸ್ತೆ ಮಾರ್ಗವಾಗಿ ದಕ್ಷಿಣಕ್ಕೆ ಸಿಲೇದಾರ ಲಾಯ ಮತ್ತು ಲೈನ್‌ಗಳು ಮತ್ತು ಮಿಳ್ಳಗಟ್ಟ ಗ್ರಾಮದ 113, 114ನೆ ಸರ್ವೆ ನಂಬರು ಜಮೀನುಗಳನ್ನು ಬಳಗೊಂಡು ಆಗುಂಬೆ ರಸ್ತೆಯಲ್ಲಿ ಇರುವ ಗಡಿಕಲ್ಲು ಬಳಿ ತುಂಗಾನದಿ ವರಿಗೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.